

## ನಭಾ ಲಾಂಗ್ ಜಂಪ್!

ಬಣ್ಣದ ಜಗತ್ತಿನಲ್ಲಿ ಎತ್ತರಕ್ಕೇರಲು ಪ್ರತಿಭೆ, ಸೌಂದರ್ಯ ಅಷ್ಟೇ ಸಾಲದು, ಅದೃಷ್ಟವೂ ಬೇಕು. ಶೃಂಗೇರಿಯ ಹುಡುಗಿ ನಭಾ ನಟೇಶ್ ಬದುಕಿನಲ್ಲಿ ಈ ಮಾತು ನಿಜವಾಗುತ್ತಿದೆ. ಸೌಂದರ್ಯ ಮತ್ತು ಪ್ರತಿಭೆ ಇವುಗಳನ್ನು ಜನ್ಮಜಾತವಾಗಿ ಪಡೆದುಕೊಂಡು ಬಂದ ಇವರ ಜತೆ ಅದೃಷ್ಟವೂ ಇದೆ ಎಂಬುದರ ಕುರುಹು ಸಿಕ್ಕಿದ್ದು – ಅವರು ಬಿಗ್ ಬ್ಯಾನರ್‌ನ 'ವಜ್ರಕಾಯ' ಚಿತ್ರಕ್ಕೆ ನಾಯಕಿಯಾಗಿ ಆಯ್ಕೆಯಾದಾಗ. ಮೊದಲ ಚಿತ್ರದಲ್ಲಿಯೇ ಶಿವರಾಜ್ ಕುಮಾರ್ ಜೊತೆ ತೆರೆ ಹಂಚಿಕೊಳ್ಳುವ ಅವಕಾಶ.

ನಂತರ ನಾಯಕಿಯಾಗಿ ನಟಿಸಿದ 'ಲೀ' ಮತ್ತು 'ಸಾಹೇಬ' ಚಿತ್ರಗಳು ಗಲ್ಲಾಪೆಟ್ಟಿಗೆಯಲ್ಲಿ ಸದ್ದು ಮಾಡಲಿಲ್ಲ. ನಭಾ ಹೆಚ್ಚು ಸುದ್ದಿ ಮಾಡಲಿಲ್ಲ. ಹೀಗೆಂದುಕೊಳ್ಳುತ್ತಿರುವಾಗಲೇ ಈ ಹುಡುಗಿ ತೆಲುಗಿಗೆ ಹಾರಿಯಾಗಿತ್ತು. ಅಲ್ಲಿ ಮಹೇಶ್ ಬಾಬು ಅವರ ಸಂಬಂಧಿ ಸುಧೀರ್ ಬಾಬು ಅವರ ಜತೆ 'ನನ್ನು ದೋಚುಕುಂಡುವಾಟೆ' ಎನ್ನುತ್ತ ತೆರೆಯ ಮೇಲೆ ನಲಿದರು. 'ಅದುಗೋ' ಎಂಬ ಕಾಮಿಡಿ ಸಿನಿಮಾದಲ್ಲಿಯೂ ನಟಿಸಿದರು.

ಇದೀಗ ಮತ್ತೊಂದು ಜಾಕ್‌ಪಾಟ್ ನಭಾ ಅವರ ಹೆಸರಿಗೆ ಬರೆದುಕೊಂಡಿದೆ. ಅದು ತೆಲುಗಿನ ಸೂಪರ್‌ಸ್ಟಾರ್ 'ರವಿತೇಜ' ಅವರ ಚಿತ್ರದಲ್ಲಿ ನಾಯಕಿಯಾಗಿ ನಟಿಸುವ ಅವಕಾಶ! ಬಲ್ಲ ಮೂಲಗಳ ಪ್ರಕಾರ ಇದೊಂದು ಆ್ಯಕ್ಷನ್ ಥ್ರಿಲ್ಲರ್ ಕಥಾವಸ್ತು ಇರುವ ಚಿತ್ರವಂತೆ.

ಹೊಸ ಸಿನಿಮಾ ಕುರಿತು ಕೇಳಿದರೆ ಜಾಣತನದಿಂದ ಮಾತು ಬದಲಿಸುವ ನಭಾ, 'ನನ್ನು ದೋಚುಕುಂಡುವಾಟೆ' ಚಿತ್ರದ ಅವರ ಪಾತ್ರಕ್ಕೆ ಸಿಕ್ಕ ಪ್ರತಿಸ್ಪಂದನದ ಕುರಿತು ಹೇಳುತ್ತಾರೆ. 'ಈ ಚಿತ್ರದಲ್ಲಿ ನನ್ನನ್ನು ನೋಡಿದ ಹಲವರು ಬೊಮ್ಮರಿಲ್ಲು ಸಿನಿಮಾದ ಜೆನಿಲಿಯಾ ಹಾಗೆ ಕಾಣ್ತೀರಿ ಅನ್ನುತ್ತಿದ್ದಾರೆ. ಇದರಿಂದ ನನಗೆ ಸಾಕಷ್ಟು ಅವಕಾಶಗಳೂ ಬರುತ್ತಿವೆ' ಎನ್ನುವ ಅವರು ರವಿತೇಜ ಸಿನಿಮಾ ಹೊರತಾಗಿಯೂ ಮೂರು ಚಿತ್ರಗಳ ಕಥೆ ಚರ್ಚೆಯಲ್ಲಿದೆಯಂತೆ. ತಮಿಳಿನಲ್ಲಿಯೂ ಒಂದು ಚಿತ್ರಕ್ಕೆ ಸಹಿ ಮಾಡುವ ಸಿದ್ಧತೆಯಲ್ಲಿ ಅವರಿದ್ದಾರೆ.

## ಹಳೆ ತಲೆ; ಹೊಸ ಕನಸು!

'ನಾನು ಸಮಯದ ಜೊತೆಯಲ್ಲಿಯೇ ಇದ್ದೆ. ಮಧ್ಯದಲ್ಲಿ ಎಲ್ಲೋ ತಾಳ ತಪ್ಪಿತು. ಅಂದುಕೊಂಡಿದ್ದನ್ನು ಅಂದುಕೊಂಡ ಹಾಗೆಯೇ ಮಾಡಲು ಸಾಧ್ಯವಾಗಲಿಲ್ಲ.'

ಇಷ್ಟುಹೇಳಿ ತುಸು ಸುಮ್ಮನಾದ ಸುನೀಲ್ ಕುಮಾರ್ ದೇಸಾಯಿ ಅವರ ಮುಖದಲ್ಲಿ ಹಳೆಯ ನೋವಿನ ಎಳೆಯೊಂದು ಹಾದುಹೋಯಿತು. ಮರುಕ್ಷಣವೇ ಅದನ್ನು ಮರೆಮಾಚುವ ವಿಶ್ವಾಸದ ಧ್ವನಿಯಲ್ಲಿ – 'ಈಗ ನಿರ್ದೇಶಿಸಿರುವ ಉದ್ಘರ್ಷ ಚಿತ್ರ ಖಂಡಿತ ಜನರಿಗೆ ಹೊಸ ಅನುಭವ ನೀಡುತ್ತದೆ. ನನ್ನ ಜತೆಗೆ ಒಳ್ಳೆಯ ತಂಡವೂ ಸಿಕ್ಕಿದೆ. ಗೆಲ್ಲುವ ನಂಬಿಕೆ ಇದೆ' ಎಂದರು.



'ಉದ್ಘರ್ಷ' ಒಂದು ಮರ್ಡರ್ ಮಿಸ್ಟರಿ. ಕೆಲವೇ ಗಂಟೆಗಳಲ್ಲಿ ನಡೆಯಲಿರುವ ಸನ್ನಿವೇಶಗಳನ್ನು ಬಿಗಿಯಾಗಿ ಹೆಣೆದು ಎರಡೂ ಕಾಲು ಗಂಟೆಗಳ ಕಾಲ ಪ್ರೇಕ್ಷಕರ ಉಸಿರನ್ನು ಹಿಡಿತಕ್ಕೆ ತೆಗೆದುಕೊಳ್ಳುವ ಹಾಗೆ ಅವರು ಈ ಸಿನಿಮ ಕಟ್ಟಿದ್ದಾರಂತೆ. ಇನ್ನಷ್ಟು ವಿಭಿನ್ನ ಕಥೆಗಳೂ ಅವರ ಜೋಳಿಗೆಯಲ್ಲಿ ಈಗಾಗಲೇ ಸಿದ್ಧಗೊಂಡಿವೆ. 'ಒಂದು ಟೆರರಿಸ್ಟ್ ಕಥೆ ಇಟ್ಟುಕೊಂಡಿದ್ದೇನೆ. ಭಯೋತ್ಪಾಕದರ ಮಧ್ಯ ಸಿಲುಕಿಕೊಂಡಿರುವಾಗಲೂ ಮಾನವೀಯತೆ ಮೆರೆಯುವ ಮನುಷ್ಯನ ಕಥೆ ಅದು. ಕಠ್ಮಂಡುವಿನಲ್ಲಿ ಚಿತ್ರದ ಶೂಟಿಂಗ್ ಮಾಡುವ ಯೋಚನೆ ಇದೆ' ಎಂದು ಹೊಸ ಕಥೆಯ ಕುರಿತು ಅವರು ಹೇಳುತ್ತಾರೆ. ಇದು ಪಕ್ಕಾ ಥ್ರಿಲ್ಲರ್ ಚಿತ್ರವಂತೆ. ಅದರ ಜತೆಗೆ ಒಂದು ಸುಂದರ ಪ್ರೇಮಕಥೆಯೂ ಅವರಲ್ಲಿದೆ. 'ಈ ಚಿತ್ರದ ಶೀರ್ಷಿಕೆಯೇ ವಿಭಿನ್ನವಾಗಿದೆ. ಅದನ್ನು ಕೇಳಿದ ಎಲ್ಲರೂ ಲವ್ ಸ್ಟೋರಿಗೆ ಇಂಥದ್ದೊಂದು ಹೆಸರು ಇಡಲು ಸಾಧ್ಯವೇ ಎಂದು ಚಕಿತರಾಗುತ್ತಾರೆ' ಎಂದು ಉತ್ಸಾಹದಿಂದ ಹೇಳುತ್ತಾರೆ. 'ಬದುಕಲಿಕ್ಕಾಗಿ ಪ್ರೇಮಿಸುವವರನ್ನು ನೋಡಿದ್ದೇವೆ. ಆದರೆ ಸಾಯಲಿಕ್ಕಾಗಿಯೇ ಪ್ರೇಮಿಸುವವರ ಕಥೆ ನನ್ನದು' ಎಂದು ಪ್ರೇಮಕಥೆಯನ್ನು ಹೇಳುವಾಗಲೂ ತಮ್ಮ ಸಸ್ಪೆನ್ಸ್ ಗುಣವನ್ನು ಬಿಟ್ಟುಕೊಡುವುದಿಲ್ಲ ಅವರು.



★ ಚಿತ್ರ: ಕೆ.ಎನ್. ನಾಗೇಶ್‌ಕುಮಾರ್